# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 138 |
| ಉತ್ತರಿಸಬೇಕಾದ ದಿನಾಂಕ | : | 05.07.2023 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಪಶು ಹಾಗೂ ಪ್ರಾಣಿಗಳ ಆರೋಗ್ಯ ದೃಷ್ಟಿಯಿಂದ ಪ್ರತಿ ತಾಲ್ಲೂಕುಗಳಿಗೆ Mobile Ambulance ವಾಹನಗಳನ್ನು ನೀಡಲಾಗಿದೆಯೇ; | ಹೌದು.<br>ರಾಜ್ಯದ ಎಲ್ಲಾ 240 ತಾಲ್ಲೂಕುಗಳಿಗೆ ಸಂಚಾರಿ ಪಶುಚಿಕಿತ್ಸಾ ವಾಹನಗಳನ್ನು ನೀಡಲಾಗಿದೆ. |
| ಆ) | ಸದರಿ Mobile Ambulance ಗಳನ್ನು ತುರ್ತು ಸೇವೆಗೆ ಬಳಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಳಸದೆ ಇರಲು ಕಾರಣಗಳೇನು; (ವಿವರ ನೀಡುವುದು) | ಸದರಿ Mobile Ambulance ಗಳನ್ನು ತುರ್ತು ಸೇವೆಗೆ ಬಳಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆ.<br>ಸಂಚಾರಿ ಪಶು ಚಿಕಿತ್ಸಾ ಘಟಕ ವಾಹನಗಳ ಸೇವೆಯನ್ನು ಸೇವಾ ಪೂರೈಕೆದಾರರ ಮುಖಾಂತರ ಪ್ರಾರಂಭಿಸಲು ಇ-ಪೋರ್ಟಲ್‌ನಲ್ಲಿ RFP (Request for proposal) ಟೆಂಡರ್ ಆಹ್ವಾನಿಸಲಾಗಿತ್ತು.<br>ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಟೆಂಡರ್‌ನ್ನು ಪಾಲುದಾರಿಕೆಯಲ್ಲಿ M/s Eduspark International Limited, Maharastra (lead member), M/s. Udbhav Educational And Rural Development Society (R.,) Bangalore & M/s Pashupatinath, Distributors Private Limited, Patna ಇವರುಗಳು ಅರ್ಹ ಸೇವಾ ಪೂರೈಕೆದಾರರಾಗಿ ಆಯ್ಕೆಯಾಗಿರುತ್ತಾರೆ.<br>ಅದರಂತೆ ಟೆಂಡರ್ ಅರ್ಹಗೊಂಡಿರುವುದನ್ನು ಪ್ರಶ್ನಿಸಿ, ದಿನಾಂಕ:17.02.2023 ರಂದು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿತ್ತು. ಸುಧೀರ್ಘ ವಿಚಾರಣೆಯ ನಂತರ ದಿನಾಂಕ:25.03.2023 ರಂದು ಪ್ರಕರಣವು ಇಲಾಖೆ ಪರವಾಗಿ ತೀರ್ಪು ಬಂದಿರುತ್ತದೆ. ಮಾರ್ಚ್-2023ರ ಮಾಹೆಯಲ್ಲಿ ಚುನಾವಣೆ ನೀತಿ ಸಂಹಿತೆ ಜಾರಿಯಾಯಿತು.<br>ಆದುದರಿಂದ ಈ ಎಲ್ಲಾ ಕಾರಣಗಳಿಂದ ಸಂಚಾರಿ ಪಶು ಚಿಕಿತ್ಸಾ ಘಟಕ ವಾಹನಗಳ ಸೇವೆ ಪ್ರಾರಂಭಿಸಲು ವಿಳಂಬವಾಗಿರುತ್ತದೆ. |

| | | |
|---|---|---|
| ಇ) | Ambulance ಚಾಲಕರು ಮತ್ತು ಪ್ರತ್ಯೇಕ ತಜ್ಞ ವೈದ್ಯರ ನೇಮಕಾತಿ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ಡ್ರೈವರ್ ಮತ್ತು ತಜ್ಞ ವೈದ್ಯರನ್ನು ನೇಮಕ ಮಾಡಲಾಗುವುದು; | Ambulance ಚಾಲಕರು ಮತ್ತು ಪ್ರತ್ಯೇಕ ತಜ್ಞ ವೈದ್ಯರ ನೇಮಕಾತಿ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಸಂಚಾರಿ ಪಶು ಚಿಕಿತ್ಸಾ ಘಟಕ ವಾಹನಗಳ ಸೇವೆಗಾಗಿ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಸೇವಾ ಪೂರೈಕೆದಾರರು ಅಗತ್ಯ ಸಿಬ್ಬಂದಿಗಳನ್ನು (ಪಶುವೈದ್ಯರು, ಅರೆತಾಂತ್ರಿಕ ಸಿಬ್ಬಂದಿ ಮತ್ತು ವಾಹನ ಚಾಲಕರು ಕಮ್ ಅಟೆಂಡರ್ ಮತ್ತು ಕರೆ ನಿರ್ವಾಹಕರು) 3 ವರ್ಷಗಳ ಅವಧಿಗೆ ನೇಮಕಾತಿ ಮಾಡಿಕೊಳ್ಳುವ ಮತ್ತು ತರಬೇತಿ ನೀಡುವ ಪ್ರಕ್ರಿಯೆ ಚಾಲನೆಯಲ್ಲಿದೆ.<br><br>ರಾಜ್ಯದಲ್ಲಿ ಈ ಯೋಜನೆಯನ್ನು ಪ್ರಥಮ ಬಾರಿಗೆ ಅನುಷ್ಠಾನಗೊಳಿಸಲಾಗುತ್ತಿರುವ ಪ್ರಯುಕ್ತ ಪೂರ್ವಭಾವಿ ಪ್ರಕ್ರಿಯೆ ಪೂರ್ಣಗೊಂಡ ನಂತರ ಸಂಚಾರಿ ಪಶುಚಿಕಿತ್ಸಾ ಘಟಕ ವಾಹನಗಳ ಸೇವೆಯನ್ನು ಸೇವಾ ಪೂರೈಕೆದಾರರ ಮುಖಾಂತರ ಶೀಘ್ರದಲ್ಲಿ ಪ್ರಾರಂಭಿಸಲು ಕ್ರಮ ವಹಿಸಲಾಗುವುದು. |
| ಈ) | ತುರ್ತು ಸಂದರ್ಭದಲ್ಲಿ ಕಾರ್ಯ ನಿರ್ವಹಿಸಲು ಹಾಲಿ ಇರುವ ವೈದ್ಯರನ್ನು Ambulance ಸೇವೆಗೆ ಬಳಸಲು ಯಾವ ಕ್ರಮ ಕೈಗೊಳ್ಳಲಾಗಿದೆ? | ತುರ್ತು ಸಂದರ್ಭದಲ್ಲಿ ಕಾರ್ಯ ನಿರ್ವಹಿಸಲು ಹಾಲಿ ಇರುವ ವೈದ್ಯರನ್ನು Ambulance ಸೇವೆಗೆ ಬಳಸಲು ಅವಕಾಶವಿರುವುದಿಲ್ಲ.<br><br>Ambulance ಸೇವೆ ನೀಡಲು ಸೇವಾ ಪೂರೈಕೆದಾರರು ಸಾಮಾನ್ಯ ಪಶುವೈದ್ಯರನ್ನು ಮತ್ತು ಅಗತ್ಯ ಸಿಬ್ಬಂದಿಗಳನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ನೇಮಕಾತಿ ಮಾಡಿಕೊಳ್ಳುವ ಪ್ರಕ್ರಿಯೆ ಚಾಲನೆಯಲ್ಲಿದೆ. |

**ಇ–ಪಸಂಮೀ 105 ಸಲೆವಿ 2023**

(ಕೆ.ವೆಂಕಟೇಶ್)

**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**